PROCEDURE IN RESPECT OF TRANSFER OF GOVERNMENT SERVANTS

299. Sri B. G. BANAKAR (Hirekerur) :—

Will the Chief Minister be pleased to state :—

(*a*) whether it has come to the notice of Government that Heads of various Departments are transferring Gazetted and Non-Gazetted Government servants working under their control and again cancelling the transfer orders frequently without any basis ;

(*b*) whether there are any Standing Orders of Government in the matter of transfer of Government servants ;

(*c*) if so, the steps the Government intend to take or has taken to regulate the transfer of Government servants by various Heads of Departments ?

Sri H. M. CHANNABASAPPA (Minister for Public Works and Electricity) [On behalf of Sri D. DEVARAJ URS (Chief Minister)].—

(*a*) No.

(*b*) Yes.

(*c*) The procedure to be followed in respect of transfer of Government servants is contained in various orders issued from time to time. Copies of these orders are placed on the table of the House.*

ಶ್ರೀ ಬಿ. ಜಿ. ಬಣಕಾರ್.—ಪ್ರಾಥಮಿಕ ಶಾಲಾ ಶಿಕ್ಷಕರು, ತಲಾಟಿಗಳು, ಗ್ರಾಮಸೇವಕರು ಇವರನ್ನೆಲ್ಲ ನಾಲ್ಕು ವರ್ಷಕ್ಕಿಂತ ಹೆಚ್ಚು ಅವರವರ ತಾಲ್ಲೂಕಿನಲ್ಲಿ ಇಡಬಾರದು ಎನ್ನುವುದು ಸರ್ಕಾರದ ಧೋರಣೆ ಇರುವುದರಿಂದ, ಗೆಜೆಟೆಡ್ ನೌಕರದಾರರನ್ನು ಅವರವರ ತಾಲ್ಲೂಕಿನಲ್ಲಿ ನಾಲ್ಕು ವರ್ಷಕ್ಕಿಂತ ಹೆಚ್ಚಾಗಿ ಇಡುವುದರ ಅವಶ್ಯಕತೆ ಏನು ? ಅವರನ್ನೂ ಬೇರೆ ಕಡೆಗೆ ವರ್ಗ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ಸಾಮಾನ್ಯವಾಗಿ ನಾಲ್ಕು ವರ್ಷಗಳು ಒಂದು ಸ್ಥಳದಲ್ಲಿ ಒಬ್ಬ ಅಧಿಕಾರಿ ಇದ್ದ ಮೇಲೆ ಸಾಮಾನ್ಯವಾಗಿ ಅವರನ್ನು ಬೇರೆ ಕಡೆಗೆ ವರ್ಗ ಮಾಡತಕ್ಕದ್ದು ಉಚಿತ ಎಂದು ನಿಯಮವಿದೆ.

ಶ್ರೀ ಬಿ. ಜಿ. ಬಣಕಾರ್.—ವರ್ಗ ಮಾಡಿದರೂ ಕೂಡ ತಮ್ಮ ಹುದ್ದೆಗೆ ಹೋಗಿ ಹಾಜರಾಗದೆ, ಕೆಲಸಮಾಡದೆ, ವಿನಾ ಕಾರಣ ರಜೆ ಕಾಕಿ ಬೆಂಗಳೂರಿಗೆ ಬಂದು ವರ್ಗಾವರ್ಗಿ ರದ್ದುಪಡಿಸುವುದಕ್ಕೆ ಪ್ರಯತ್ನ ಮಾಡುವ ಅಧಿಕಾರಿಗಳ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಿರ್ದಾಕ್ಷಿಣ್ಯವಾಗಿ ಮತ್ತು ನಿರ್ಭಯವಾಗಿ ಕ್ರಮ ತೆಗೆದು ಕೊಳ್ಳುತ್ತೇವೆ.

ಶ್ರೀ ಕೆ. ಎನ್. ವೀರಪ್ಪಗೌಡ.—ನಾಲ್ಕು ವರ್ಷವಾದ ಮೇಲೆ ಸಾಮಾನ್ಯವಾಗಿ ಬದಲಾವಣೆ ಮಾಡಲಾಗುತ್ತದೆ ಎಂದು ಉತ್ತರದಲ್ಲಿ ಹೇಳಿದ್ದಾರೆ. ಕೆಲವು ಕಡೆ ಮೂರು ನಾಲ್ಕು ತಿಂಗಳಿಗೆ ವರ್ಗ ಮಾಡತಕ್ಕದ್ದು, ಇನ್ನು ಕೆಲವು ಕಡೆಗಳಲ್ಲಿ, ವಿದ್ಯಾ ಇಲಾಖೆ, ನರ್ವೇ ಇಲಾಖೆ ಇತ್ಯಾದಿಗಳಲ್ಲಿ 8-10 ವರ್ಷಗಳಾದರೂ ಕೂಡ, ಸರ್ಕಾರದವರಿಗೆ ಬೇಕಾದರೂ ಕೂಡ ಹಾಗೆಯೇ ಇಡಕ್ಕುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಹಾಗಿದ್ದರೆ ಆ ರೀತಿ ಮಾಡುವುದಕ್ಕೆ ಕಾರಣವೇನು ?

*Copies placed in the Mysore Legislative Library *vide* Nos. 3, dated 8th December 1972.

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾನ್ಯ ಸದಸ್ಯರು ಹೇಳುವಂತೆ 8-10 ವರ್ಷ ಒಂದೇ ಕಡೆ ಇದ್ದ ಪಕ್ಷದಲ್ಲಿ ಖಂಡಿತ ವಿನಾ ಕಾರಣ ಇಟ್ಟಿರುವುದಿಲ್ಲ. ಅಕಸ್ಮಾತ್ ವಿನಾಕಾರಣ ಯಾರಾದರೂ ಇದ್ದರೆ ಏನೋ ಮಹತ್ತರವಾದ ಕಾರಣಗಳಿರಬೇಕು. ಅಂಥ ಕೇಸುಗಳನ್ನು ತಿಳಿಸಿದರೆ ಅದರ ಬಗ್ಗೆ ಏನು ಕಾರಣದಿಂದ ಇದ್ದಾರೆಂದು ತಿಳಿಸುತ್ತೇನೆ.

ಶ್ರೀ ಕೆ. ಎಚ್. ಹನುಮೆಗೌಡ.—ನಾಲ್ಕು ವರ್ಷಕ್ಕೆ ಮೇಲ್ಪಟ್ಟು ಒಬ್ಬ ಅಧಿಕಾರಿ ಸ್ಥಳ ದಲ್ಲಿದ್ದು, ಅವರ ಮೇಲೆ ದೂರುಗಳು ಬಂದು ಬೇರೆ ಕಡೆಗೆ ವರ್ಗ ಮಾಡಿದ ಮೇಲೆ, ಮೂರು ತಿಂಗಳು ಕಳೆದ ಮೇಲೆ ಪುನಃ ರಾಜಕೀಯ ಒತ್ತಡ ತಂದಾಗ ಅದೇ ಅಧಿಕಾರಿಯನ್ನು ಅದೇ ಜಾಗಕ್ಕೆ ಹಾಕಿರುವ ನಿದರ್ಶನಗಳು ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿವೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ರಾಜಕೀಯ ಒತ್ತಡವನ್ನು ತರುವುದಕ್ಕೆ ರಾಜಕಾರಣಿಗಳೇ ಕಾರಣ.

ಶ್ರೀ ಎಂ. ಬಿ. ರಾಮಸ್ವಾಮಿ.—ಲೋಕೋಪಯೋಗಿ ಇಲಾಖೆಯಲ್ಲಿ ಒಂದೂವರೆ ತಿಂಗಳಿನಲ್ಲಿ ಆನೇಕಲ್ ತಾಲ್ಲೂಕಿಗೆ ಒಬ್ಬ ಅಸಿಸ್ಟೆಂಟ್ ಇಂಜಿನಿಯರನ್ನು ಹಾಕಿದ್ದರು. ಅವರನ್ನು ಒಂದೂವರೆ ತಿಂಗಳಾದ ಮೇಲೆ ಸೂಪರಿಂಟೆಂಡಿಂಗ್ ಇಂಜಿನಿಯರು ವರ್ಗ ಮಾಡಿರುವುದರಿಂದ ಆ ತಾಲ್ಲೂಕಿನಲ್ಲಿ ತೊಂದರೆಗೆ ಕಾರಣವಾಗಿದೆ. ಆ ವಿಚಾರವನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತಂದರೂ ಕೂಡ, ಮೂರು ವರ್ಷಕ್ಕೆ ಮೊದಲು ವರ್ಗ ಮಾಡಬೇಕಾವರೆ ಸರ್ಕಾರದ ಅಪ್ಪಣೆ ಇಲ್ಲದೆ ಮಾಡಬಾರದೆಂದು ಇದ್ದರೂ ಕೂಡ ಅದನ್ನು ಸರಿಪಡಿಸದೆ ಇರುವುದಕ್ಕೆ ಕಾರಣವೇನು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕಾರಣವಿದ್ದೇ ವರ್ಗ ಮಾಡಿದ್ದೇವೆ.

ಶ್ರೀ ಎಚ್. ಡಿ. ದೇವೇಗೌಡ.—ಅಧಿಕಾರಿಗಳ ವರ್ಗದ ಬಗ್ಗೆ ಸರ್ಕಾರದವರು ಏನಾದರೂ ನಿಯಮಾವಳಿಯನ್ನು ಇಟ್ಟುಕೊಂಡಿದ್ದಾರೆಯೇ ? ಏಕೆಂದರೆ ನವೆಂಬರ್ ಡಿಸೆಂಬರ್ ತಿಂಗಳಿನಲ್ಲಿ ವರ್ಗ ಮಾಡುವಂಥ ಪ್ರವೃತ್ತಿ ಯೋಗ್ಯವಾದುದೇ ಎನ್ನುವುದನ್ನು ದಯವಾಡಿ ತಿಳಿಸುತ್ತಾರೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಿಯಮಗಳಿವೆ. ಆ ನಿಯಮಗಳನ್ನು ನಾನು ಆಗಲೇ ತಮ್ಮ ಮುಂದೆ ಇಟ್ಟಿದ್ದೇನೆ. ಆ ನಿಯಮಗಳಿಗನುಗುಣವಾಗಿ ಸರ್ವೇಸಾಧಾರಣವಾಗಿ ವರ್ಗಾವರ್ಗಿಗಳು ನಡೆಯುತ್ತವೆ. ಮಧ್ಯೆ ಏನಾದರೂ ವರ್ಗಾವರ್ಗಿಗಳು ಆಗಬೇಕಾದ ಪಕ್ಷವಲ್ಲಿ ಸಾರ್ವಜನಿಕ ಹಿತದೃಷ್ಟಿಯಿಂದ ಅತ್ಯಾವಶ್ಯಕವಾದ ಕಡೆ ಮಾತ್ರ ಮಾಡಲಾಗುತ್ತದೆ.

ಶ್ರೀ ಎಸ್. ಎಂ. ಶಿವರನಾಳಿ ಚೆಂದ್ರಶೇಖರ್.—ಸ್ವಾಮಿ ಗುಲ್ಬರ್ಗ ಕ್ಷಾಮ ಪರಿಸ್ಥಿತಿ ಬಗ್ಗೆ ಕೆಲವು ಆಫೀಸರಗಳನ್ನು ವರ್ಗ ಮಾಡಿದ್ದೀರಿ. ಅದರಲ್ಲಿ ಕೆಲವು ಇಂಜನಿಯರ್‌ಗಳನ್ನು 3 ತಿಂಗಳಿಗೆ ಮಾತ್ರ ಡೆಪ್ಯೂಟ್ ಮಾಡಿ ಕೆಲವರನ್ನು ಅಲ್ಲೇ ಖಾಯಂ ಮಾಡಿದ್ದೀರಿ, ಇದಕ್ಕೆ ಕಾರಣ ಏನು ಸ್ವಾಮಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಯಾಯಾ ಸಂದರ್ಭಗಳಿಗನುಸಾರವಾಗಿ ಮಾಡುತ್ತೇವೆಯೇ ಹೊರತು ವಿನಾಕಾರಣ ಟ್ರಾನ್ಸ್‌ಫರ್ ಮಾಡುವುದಕ್ಕೆ ಹೋಗುವುದಿಲ್ಲ.

Sri B. B. SAYANAK.—There is one B.D.O. in Belgaum. He was transferred from Bijapur to Belgaum on 20th July 1972 and again he was transferred on 13th November 1972 to Mysore. This is highly objectionable because there is a Government Order that no officer should be transferred within two years without the consent of the Chief Minister. May I know what is the reason for this kind of transfer in this case ?

Sri H. M. CHANNABASAPPA.—There must have been material reason for such a transfer and if the Hon. Member were to refer the particular case to Government we will certainly examine and tell him why we have done that.

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ.—ಸ್ವಾಮಿ, 2 ವರ್ಷಕ್ಕೊಂದು ಸಾರಿ ವರ್ಗಾವರ್ಗಿ ಸಾಮಾನ್ಯವಾಗಿ ಮಾಡಬೇಕು ಎನ್ನುವ ನಿಯಮ ಇದ್ದರೂ ಕೂಡ ಸಾರ್ವಜನಿಕ ದೃಷ್ಟಿಯಿಂದ ಅದರ ಮಧ್ಯದಲ್ಲಿ ಅಂದರೆ 2 ವರ್ಷಕ್ಕಿಂತ ಕಡಿಮೆ ಕಾಲದಲ್ಲೇ ಮಾಡುತ್ತೇವೆ

ಎಂದು ಹೇಳುತ್ತೀರಾ ? ಒಂದು ವರ್ಷಕ್ಕೆ 6 ಸಲ ಟ್ರಾನ್ಸ್‌ಫರ್ ಮಾಡಿದ ನನ್ನಿವೇಶಗಳು ಅನೇಕ ಇಲಾಖೆಗಳಲ್ಲಿ ಇವೆ. ಇದರಿಂದ ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಜನಾಂಗದವರಿಗೆ ತುತ್ತಾಗಿದ್ದಾರೆ. ಇದರಿಂದ ಇದರಲ್ಲಿ ಏನಾದರೂ ಜಾತೀಯವಾದ ನಡೆಯುತ್ತಿದೆ ಎಂದು ಭಾವಿಸೋಣವೇ ಅಥವಾ ನಿಜವಾದ ತತ್ವ ಬಾರಿಯಲ್ಲದೆ ಎಂದು ತಿಳಿದುಕೊಳ್ಳೋಣವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ವರ್ಗಾವರ್ಗಿ ಮಾಡತಕ್ಕಂಥಾದ್ದು ಜಾತೀವಾದ ಮೇಲೆ ಮಾಡುವುದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಸರ್ಕಾರದ ನಿಯಮಾವಳಿಗಳ ಪ್ರಕಾರ ನವೆಂಬರ್ ಡಿಶೆಂಬರ್‌ನಲ್ಲಿ ವರ್ಗ ಮಾಡಬಾರದು ಮತ್ತು 2 ವರ್ಷಕ್ಕಿಂತ ಮುಂಚೆ ವರ್ಗ ಮಾಡಬಾರದು. ಅದರೂ ಕೆಲವು ಒತ್ತಡಕ್ಕೋಸ್ಕರ ಮಣಿದು ವರ್ಗಾವರ್ಗಿ ಮಾಡುವ ಪ್ರವೃತ್ತಿ ನಡೆಯುತ್ತದೆ. ಇದು ಈ ಸರ್ಕಾರದಲ್ಲೇ ಅಲ್ಲ ಹಿಂದಿನ ಸರ್ಕಾರಗಳಲ್ಲೂ ನಡೆದುಕೊಂಡು ಬಂದಿದೆ. ಅದರ ಬದಲಾಗಿ ಯಾರು ಅಧಿಕಾರಿಗಳ ಮೇಲೆ ಆಕ್ಷೇಪಣೆ ಮಾಡುತ್ತಾರೋ ಯಾವ ಪಕ್ಷದವರೇ ಕೊಟ್ಟರು ಅದನ್ನು ವಿಚಾರಣೆ ಮಾಡಿ ಅವನು ತಪ್ಪಿಸ್ಥ ಎಂದು ತೀರ್ಮಾನ ಆಗುವುದಾದರೆ ಅಂಥ ಅಧಿಕಾರಿಗಳ ಮೇಲೆ ತಕ್ಕ ಕ್ರಮ ತೆಗೆದುಕೊಳ್ಳುವುದು ಸೂಕ್ತವಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ವರ್ಗ ಮಾಡುವುದು ಶಿಕ್ಷೆ ಮಾಡಬೇಕು ಎನ್ನುವ ಉದ್ದೇಶವಲ್ಲ. ಅಥವಾ ಒಬ್ಬ ಮನುಷ್ಯ ಅಲ್ಲಿ ಕೆಟ್ಟವನಾಗಿದ್ದರೆ ಎಲ್ಲಿಗೆ ಕಳುಹಿಸಿದರೂ ಕೆಟ್ಟವನಾಗಿರುತ್ತಾನೆ. ಆದುದರಿಂದ ಅಂಥಾ ಆಕ್ಷೇಪಣೆ ಬಂದ ಮಾತ್ರಕ್ಕೆ ಅವನನ್ನು ವರ್ಗ ಮಾಡುವುದು ಸರಿಯಲ್ಲ ಎನ್ನುವುದು ಸ್ಪಷ್ಟ ಅಭಿಪ್ರಾಯವಲ್ಲ. ಬೇರೆ ಕಾರಣವೂ ಇರಬಹುದು. ಯಾರ ಮೇಲಾದರೂ ಅಗಲಿ ಆಕ್ಷೇಪಣೆ ಬಂದರೂ ಕೂಡ ಅವರ ಮೇಲೆ ವಿಚಾರಣೆ ನಡೆಸುವುದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ. ಆದರೆ ಈ ಕಾರಣದ ಮೇಲೇನೇ ವರ್ಗ ಮಾಡಬೇಕು ಎನ್ನುವ ಅಭಿಮತದಿಂದ ವರ್ಗ ಮಾಡುವುದಿಲ್ಲ.

ಶ್ರೀ ಬಿ. ಜಿ. ಬಣಕಾರ್.—ಸ್ವಾಮಿ ಸರ್ಕಾರದ ನಿಯಮಾವಳಿಗಳ ಪ್ರಕಾರ ಗಂಡ ಹೆಂಡತಿ ಇಬ್ಬರೂ ಸರ್ಕಾರಿ ನೌಕರರಾಗಿದ್ದರೆ ಅವರನ್ನು ಒಂದೇ ಊರಿನಲ್ಲಿ ಇಡಬೇಕು ಎಂದು ಇದ್ದರೂ ಕೂಡ ಆರೀತಿ ಇಟ್ಟಿಲ್ಲ. ಆದ್ದರಿಂದ ಆ ನಿಯಮಾವಳಿ ಪ್ರಕಾರ ಒಂದೇ ಊರಿಗೆ ಅವರನ್ನು ಪೋಸ್ಟ್ ಮಾಡುವುದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸಾಧ್ಯವಾದಷ್ಟು ಕೂಡ ಹ್ಯೂಮನ್ ಕನ್ಸಿಡರೇಷನ್ ಮೇಲೆ ವಿಚಾರ ಮಾಡುವುದು ಯೋಗ್ಯ. ಆದರೆ ಎಷ್ಟು ದಿವಸದವರೆಗೆ ಗಂಡ ಹೆಂಡತಿ ಇಬ್ಬರನ್ನೂ ಕೂಡ ಒಂದೇ ಊರಿನಲ್ಲಿ ಇಡುವುದಕ್ಕಾಗುತ್ತದೆ ಎನ್ನುವ ಪ್ರಶ್ನೆಯೂ ಬರುತ್ತದೆ. ಎಲ್ಲೆಲ್ಲಿ ಸಾಧ್ಯವೋ ಅಲ್ಲಲ್ಲಿ ಈರೀತಿ ಅಕಾಮಡೇಟ್ ಮಾಡುವುದು ಯೋಗ್ಯ ಎನ್ನುವುದನ್ನು ಒಪ್ಪಿಕೊಳ್ಳುತ್ತೇನೆ, ಮತ್ತು ನೀವು ಹೇಳಿದ ತತ್ವವನ್ನೂ ಕೂಡ ಒಪ್ಪಿಕೊಳ್ಳುತ್ತೇನೆ. ಆದರೆ ಸಮಯ ಸಂದರ್ಭಾನುಸಾರವಾಗಿ ಅದನ್ನು ಜಾರಿಗೆ ಕೊಡಬೇಕಾಗುತ್ತದೆ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.—ಮೊದಲಿನಿಂದಲೂ ಈರೀತಿ ವರ್ಗಮಾಡುವ ಪದ್ಧತಿ ಇದೆ ಇನ್ನು ಮೇರಾದರೂ ಸಹ ವರ್ಷದ ಮಧ್ಯದಲ್ಲಿ ವರ್ಗ ಮಾಡುವುದನ್ನು ತಪ್ಪಿಸಿ ಮಾರ್ಚ್ ಏಪ್ರಿಲ್ ತಿಂಗಳಿನಲ್ಲಿ ಅವರ ಸೀನಿಯಾರಿಟಿ ಲಿಸ್ಟ್‌ನ್ನು ಕಂಡುಹಿಡಿದು ವರ್ಗ ಮಾಡುವುದಕ್ಕೆ ಏನು ತೊಂದರೆ ಇದೆ ? ಅನೇಕ ಸಂದರ್ಭಗಳಲ್ಲಿ ಈರೀತಿ ವರ್ಗ ಮಾಡಿದರೆ ಅವರ ಮಕ್ಕಳ ಸ್ಕೂಲ್ ವಿದ್ಯಾಭ್ಯಾಸಕ್ಕೆ, ಇನ್ನೂ ಅನೇಕ ಕೆಲಸಗಳಿಗೆ ಅವನಿಗೆ ತೊಂದರೆ ಬರುತ್ತದೆ. ಆದ ದರಿಂದ ಮಧ್ಯದಲ್ಲಿ ವರ್ಗ ಮಾಡದೆ ಮಾರ್ಚ್ ಏಪ್ರಿಲ್‌ನಲ್ಲಿ ವರ್ಗ ಮಾಡುವ ಹಾಗೆ ಇಡಕ್ಕೆ ಸಂಬಂಧಪಟ್ಟ ಎಸ್ಟಾಬ್ಲಿಷ್‌ಮೆಂಟ್ ಏನು ಇದೆಯೋ ಅವರು ಒಂದು ನಿಯಮಾವಳಿ ಮಾಡುವುದಕ್ಕಾಗುವುದಿಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈರೀತಿಯಾಗಿ ಒಂದೇಸಾರಿ ವರ್ಗಮಾಡಬೇಕು ಎನ್ನುವ ನೀತಿ ಒಳ್ಳೆಯದಾಗಿದ್ದರೂ ಕೂಡ ಅದೇರೀತಿ ನಡೆಯುವುದು ಕೆಷ್ಟ. ಅನೇಕ ಸಾರಿ ಒಂದುಸಾರಿ ಪ್ರಮೋಷನ್ ಮಾಡಬೇಕಾದಲ್ಲಿ 3 ತಿಂಗಳಿಗೇನೇ ಕಳುಹಿಸಬೇಕಾಗುತ್ತದೆ; ಮತ್ತು ಅವರಿಂದ ವಿಶೇಷ ಮಾಹಿತಿ ದೊರೆಯಬೇಕಾಗಿದ್ದರೆ ಅಂಥಾ ಸಂದರ್ಭದಲ್ಲೂ ಮಧ್ಯೆ ಕಳುಹಿಸಬೇಕಾಗುತ್ತದೆ, ಈ ರೀತಿ ನನ್ನಿವೇಶಗಳು ಮಧ್ಯೆ ಬಾರದಿರುವುದರಿಂದ ಅಂಥ ಸಂದರ್ಭದಲ್ಲಿ ವರ್ಗ ಮಾಡಬೇಕಾಗುತ್ತದೆ, ಆದರೆ ತಾವು ಹೇಳಿದಂತೆ ಇದಕ್ಕೆ ಒಂದು ರೂಲು ಇದೆ. ಸಾಮಾನ್ಯವಾಗಿ ಏಪ್ರಿಲ್ ಮೇ ತಿಂಗಳಿನಲ್ಲೇ ವರ್ಗ ಮಾಡಬೇಕು ಎಂದು ಅದನ್ನು ಅನುಸರಿಸಬೇಕು ಎಂದು ಸರ್ಕಾರ ಸ್ಪಷ್ಟವಾಗಿ ತಿಳುವಳಿಕೆ ಕೊಟ್ಟಿದೆ. ವಿಶೇಷವಾದ ಕಾರಣಗಳಿಗಾಗಿ ಮಧ್ಯ ವರ್ಗ ಮಾಡಬೇಕಾಗುತ್ತದೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಸಾಮಾನ್ಯವಾಗಿ ಮಂತ್ರಿಗಳು ಪ್ರವಾಸ ಹೋದಾಗ ಜಾಸ್ತಿ ವರ್ಗಾವರ್ಗಿಗಳ ಬಗ್ಗೆ ತಮಗೆ ರೆಪ್ರೆಸೆಂಟೇಷನ್ ಬರುವುದಿಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ತಾವು ಆರೀತಿ ಹೇಳಬಹುದು. ಅವರನ್ನು ವರ್ಗ ಮಾಡುವುದಕ್ಕೆ ರೆಪ್ರೆಸೆಂಟೇಷನ್ ತೆಗೆದುಕೊಳ್ಳುವುದು ಒಂದಕ್ಕೆ ಮಂತ್ರಿಗಳು ಪ್ರವಾಸ ಹೋಗುವುದಿಲ್ಲ. ಅನೇಕ ವಿಷಯಗಳ ಬಗ್ಗೆ ಪ್ರವಾಸ ಹೋಗಬೇಕಾಗುತ್ತದೆ. ಅದರ ಜೊತೆಗೆ ಇದೂ ಒಂದು.

ಶ್ರೀ ಕೆ. ಪ್ರಭಾಕರ್.—ಸರ್ಕಾರಿ ನೌಕರರ ನಡತೆ ವಿಷಯದಲ್ಲಿ ವಿಚಾರಣೆ ನಡೆಯಬೇಕು ನಿಜ. ಅವರನ್ನು ಸಸ್ಪೆನ್‌ಷನ್ ಇಟ್ಟು ವಿಚಾರಣೆ ನಡೆಯಬೇಕೇ ವಿನಃ ಆರೀತಿ ವರ್ಗ ಮಾಡುವುದರಿಂದ ಏನೂ ಪ್ರಯೋಜನವಿಲ್ಲಾ. ಆ ರೀತಿ ಮಾಡುವುದು ತಪ್ಪು. ಅವರನ್ನು ಎನ್‌ಕ್ವೈರಿ ಮಾಡಬೇಕಾದರೆ ವರ್ಗ ಮಾಡುವ ಬದಲು ಸಸ್ಪೆನ್‌ಷನ್‌ನಲ್ಲಿ ಇಟ್ಟು ವಿಚಾರಣೆ ಮಾಡುವುದು ಸೂಕ್ತವಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸಸ್ಪೆನ್‌ಷನ್‌ನಲ್ಲಿ ಇಟ್ಟು ವಿಚಾರಣೆ ಮಾಡುವುದೂ ಕೆಲವು ಕೇಸುಗಳು ಇವೆ, ಹಾಗೆಯೇ ವಿಚಾರಣೆ ಮಾಡುವುದೂ ಕೆಲವು ಕೇಸುಗಳು ಇವೆ. ಏನಾದರೂ ಸೀರಿಯಸ್ ಕೇಸ್‌ಗಳು ಯಾವುದಾದರೂ ಇದ್ದರೆ ಆ ಸಂದರ್ಭದಲ್ಲಿ ಸಸ್ಪೆನ್‌ಷನ್‌ನಲ್ಲಿ ಇಟ್ಟು ಎನ್‌ಕ್ವೈರಿ ಮಾಡಬೇಕಾಗುತ್ತದೆ. ಕಾರಣ ಅವನು ಅಧಿಕಾರವನ್ನು ದುರುಪಯೋಗ ಮಾಡ್ಕೊಂಡಿದರೆ ಅದಕ್ಕೆ ಸಂಬಂಧಪಟ್ಟ ಸಾಕ್ಷಿ, ಸಾಕ್ಷಿತ್ವ, ಮಾಹಿತಿ, ಇವುಗಳು ಅಗಿಂದಾಗ್ಗೆ ಬೇಕಾದರೆ ಅವನ ಮೇರೆ ಸೀರಿಯಸ್ ಅಲಗೇಷನ್ ಆದ ಸಂದರ್ಭದಲ್ಲಿ ಅವನನ್ನು ಸಸ್ಪೆನ್‌ಷನ್ ಮಾಡುತ್ತೇವೆ.

ಶ್ರೀ ಟಿ. ಎಂ. ಮಂಜುನಾಥ್ —ಈ ವರ್ಗಾವರ್ಗಿ ಆಗುವುದು ಪ್ರತಿಭಾವಂತ ವ್ಯಕ್ತಿಗಳಿಂದ. ಅವರ ಪ್ರಭಾವದಿಂದ ವರ್ಗ ಮಾಡುತ್ತಾರೆ. ನಿಮ್ಮ ಪಕ್ಷದವರು ಒಬ್ಬರನ್ನು ವರ್ಗ ಮಾಡಿ ಎಂದು ಹೇಳಿದಾಗ ತಕ್ಷಣ ಆದೇಶ ಕೊಟ್ಟಿದ್ದೀರಿ, ಅವನ್ನು ರಿಲೀವ್ ಮಾಡಿ ಕಳುಹಿಸಿಕೊಡಿ ಎಂದು. ಮತ್ತೆ ಅವನಿಗೆ ರಿಲೀವ್ ಕೂಡ ಆಯಿತು. ಮತ್ತೆ ಅವರೇ ಬಂದು ಅವನನ್ನು ಇಲ್ಲೇ ಉಳಿಸಿಕೊಡಿ ಎಂದು ಕೇಳಿಕೊಂಡಾಗ ರಿಲೀವ್ ಆದವನನ್ನು ಅಲ್ಲಿಗೇ ವಾಪಸ್ಸು ಕಳುಹಿಸಿಕೊಟ್ಟಿದ್ದೀರಿ. ಇವಕ್ಕೆ ಕಾರಣ ಏನು ಎಂದು ತಿಳಿಸುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಂಥಾದ್ದು ಯಾವುದಾದರೂ ಕೇಸು ಇದ್ದ ಪಕ್ಷದಲ್ಲಿ ನನ್ನ ಗಮನಕ್ಕೆ ತಂದರೆ ಅದಕ್ಕೆ ಕಾರಣ ಏನು ಎಂದು ತಮಗೆ ಸಮಾಧಾನವಾಗುವಂತೆ ವಿವರಿಸಿ ತಿಳಿಸಿಕೊಡುತ್ತೇನೆ.

MALPRACTICES IN AIDED SCHOOLS

313. Sri M. S. KRISHNAN (Malleswaram).—

Will the Minister for Education be pleased ot state :—

(*a*) whether the Government is aware of several malpractices and irregularities in the functioning and conduct of affairs of Aided Schools, such as Nandanavana Fort School (Kodhandaramapur) Bangalore, JAV School (Kodhandaramapur), Bangalore, etc. ;

(*b*) whether it is a fact that the teachers in most of the Aided Schools in the State are not being paid their full salary despite the Cheque system ;

(*c*) the action the Government has taken to put down these malpractices ;

(*d*) whether the Government intends to take over all the aided schools in the State and run them as Government Schools in the interest of the teachers, students, parents and education ?